ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಕ್ರೀಡಾಂಗಣಕ್ಕೆ ಈ ತನಕ ಮಂಜೂರಾದ ಮೊತ್ತವೆಷ್ಟು? ಖರ್ಚಾದ ಮೊತ್ತವೆಷ್ಟು? ಯಾವಾಗ ಈ ಕ್ರೀಡಾಂಗಣವನ್ನು ಪೂರ್ತಿಗೊಳಿಸಲಾಗುವುದು?

ಆ) ಕೇಂದ್ರ ಸರ್ಕಾರದ ಸಹಾಯವನ್ನು ಈ ಕ್ರೀಡಾಂಗಣಕ್ಕೆ ಸರ್ಕಾರ ವಿನಂತಿಸಿದೆಯೇ; ಈ ಕೆಲಸ ಯಾವ ಹಂತದಲ್ಲಿದೆ?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಈವರೆಗೆ ಪುತ್ತೂರು ಕ್ರೀಡಾಂಗಣಕ್ಕೆ ಜಿಲ್ಲಾ ಪಂಚಾಯತ್ ನಿಂದ ಮಂಜೂರಾದ ಒಟ್ಟು ಮೊತ್ತ ರೂ. 20,25,000 ಖರ್ಚಾದ ಮೊತ್ತ ರೂ. 16,91,385-00, ಕ್ರೀಡಾಂಗಣದ ಬಾಕಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಬೇಕಾಗುವ ರೂ. 48.00 ಲಕ್ಷಗಳನ್ನು ಜಿಲ್ಲಾ ಪಂಚಾಯತಿಯು ಒದಗಿಸಿದ ನಂತರ ಕ್ರೀಡಾಂಗಣ ಪೂರ್ತಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಹೌದು. 1996ರಲ್ಲಿ ಕೇಂದ್ರ ಸರ್ಕಾರದ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಅನುದಾನ ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿ, ಕೇಂದ್ರ ಸರ್ಕಾರವು 9ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಪ್ರಸ್ತಾವನೆಯನ್ನು ನವೀಕರಿಸಲು ಸೂಚಿಸಿತ್ತು. ಈಗ ಪರಿಷ್ಕೃತ ಅಂದಾಜು ವೆಚ್ಚಕ್ಕೆ ತಾಂತ್ರಿಕ ಅನುಮೋದನೆ ಪಡೆದು ಹೊಸದಾಗಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು.

ಯಕ್ಷಗಾನ ಕಲಾವಿದರಿಗೆ ಮಾಸಾಶನ

101(219)

ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಯಕ್ಷಗಾನ ರಂಗದಲ್ಲಿ ಈ ತನಕ ಎಷ್ಟು ಕಲಾವಿದರಿಗೆ ಮಾಸಾಶನ, ಗೌರವಧನ ಹಾಗೂ ಇತರ ಸೌಕರ್ಯಗಳನ್ನು ಒದಗಿಸಲಾಗಿದೆ? ಎಷ್ಟು ಕಲಾವಿದರ ಅರ್ಜಿಗಳು ಸರ್ಕಾರದ ಪರಿಶೀಲನೆಯಲ್ಲಿದೆ? ಯಾವಾಗ ಕಡತಗಳನ್ನು ಇತ್ಯರ್ಥಗೊಳಿಸಲಾಗುವುದು?

ಆ) ತುಳು ಸಾಹಿತ್ಯ ಅಕಾಡೆಮಿಗೆ ಈ ತನಕ ಒಟ್ಟು ಒದಗಿಸಿದ ಅನುದಾನ ಎಷ್ಟು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು):

ಅ) 1) ಮಾಸಾಶನ-780 ಜನರಿಗೆ

2) ಗೌರವಧನ- 144 ಜನರಿಗೆ

3) ವೈದ್ಯಕೀಯ ನೆರವು 17 ಜನರಿಗೆ ನೀಡಲಾಗಿದೆ.

4) 16 ಅರ್ಜಿಗಳು ಪರಿಶೀಲನೆಯಲ್ಲಿದೆ.

ಸದ್ಯದಲ್ಲಿ ಇತ್ಯರ್ಥಗೊಳಿಸಲಾಗುವುದು.

ಆ) ಈ ತನಕ ಒಟ್ಟು ರೂ. 51.00 ಲಕ್ಷ ಅನುದಾನ ನೀಡಲಾಗಿದೆ.

ಬಾಲಕಾರ್ಮಿಕರ ಯೋಜನೆ ಜಾರಿ.

103(249)

ಶ್ರೀ ಎನ್.ಸಂಪಂಗಿ (ಬಾಗೇಪಲ್ಲಿ): ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಎ) ಬಾಲ ಕಾರ್ಮಿಕರ ಉದ್ಯೋಗ ನಿಷೇಧವು ಯಾವ ದಿನಾಂಕದಿಂದ ಜಾರಿಗೆ ಬಂದಿರುತ್ತದೆ?

ಬಿ) ಯಾವುದೇ ಕಾರ್ಖಾನೆಗಳು ಅಥವಾ ಖಾಸಗಿ ಸಂಸ್ಥೆಯ ಆಡಳಿತವರ್ಗದವರು ಬಾಲ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯನ್ನು ಉಲ್ಲಂಘನೆ ಮಾಡಿರುತ್ತಾರೆಯೇ?

ಸಿ) ಹಾಗಿದ್ದಲ್ಲಿ ಸದರಿ ಸಂಸ್ಥೆಗಳ ವಿರುದ್ಧ ಎಷ್ಟು ಮೊಕದ್ದಮೆಗಳನ್ನು ಕಳೆದ 3 ವರ್ಷಗಳಲ್ಲಿ ಕಾರ್ಖಾನೆಗಳು ಆಡಳಿತವರ್ಗದವರ ವಿರುದ್ಧ ಹೂಡಲಾಗಿರುತ್ತದೆ?

ಡಿ) ವಿಶೇಷವಾಗಿ ಬೆಂಗಳೂರು ನಗರದಲ್ಲಿರುವ ಬಹುತೇಕ ಹೋಟೆಲ್‌ಗಳಲ್ಲಿ 14 ವರ್ಷದೊಳಗಿನ ಮಕ್ಕಳನ್ನು ಸ್ವಚ್ಛತೆ ಮತ್ತು ವಿತರಣೆಗೆ ಉದ್ಯೋಗದಲ್ಲಿ ತೊಡಗಿಸಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಸದರಿ ಹೋಟೆಲ್‌ಗಳ ಆಡಳಿತವರ್ಗದವರ ವಿರುದ್ಧ ಸರ್ಕಾರವು